ದಿ.27.09.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಡಿ ವಕೀಲರಿಂದ.**

5. ನನ್ನ ವಾದ ಪತ್ರದಲ್ಲಿ ಹೇಳಿರುವ ವಂಶವೃಕ್ಷ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಲಕ್ಷ್ಮಣಪ್ಪ ಮೂಲತಹಃ ಹೊನ್ನಾಳ್ಳಿ ಗ್ರಾಮದ ಕಡದಕಟ್ಟೆ ಗ್ರಾಮದವರು. ಲಕ್ಷ್ಮಣಪ್ಪನವರ ಅಣ್ಣತಮ್ಮಂದಿರಿಗೆ ಹೊನ್ನಾಳ್ಳಿ ಗ್ರಾಮದ ಕಡದಕಟ್ಟೆ ಗ್ರಾಮದಲ್ಲಿ ಚರಾ ಮತ್ತು ಸ್ಥಿರಾಸ್ತಿ ಇರುವುದು ಗೊತ್ತಿರುತ್ತದೆ. ದಾವಾ ಸ್ವತ್ತಿನ ಐಟಂ ನಂಬರ್ 01 ಮತ್ತು 02 ಲಕ್ಷ್ಮಣಪ್ಪನವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಲಕ್ಷ್ಮಣಪ್ಪನವರಿಗೆ ಸೀತಾರಾಮ್ ಪುರದಲ್ಲಿ ಸ್ವಂತ ಮನೆ ಇತ್ತು ಎಂದರೆ ಸರಿ. ಈ ಮನೆಯಲ್ಲಿ 01 ಮತ್ತು 02 ನೇ ವಾದಿಗಳು ವಾಸವಾಗಿರುತ್ತಾರೆ. ಸದರಿ ಮನೆ ಲಕ್ಷ್ಮಣಪ್ಪನವರ ಸ್ವಂತ ಆಸ್ತಿಯಾದ ಕಾರಣ ಅವರು ಮೃತಪಟ್ಟ ನಂತರ ಅವರ ಮಕ್ಕಳಿಗೆ ಸೇರಬೇಕು ನನಗೆ ಸೇರುವುದಿಲ್ಲ ಎಂದರೆ ಸರಿಯಲ್ಲ. ನಾನು ರಂಗಪ್ಪನ ಹೆಂಡತಿಯಲ್ಲ ಮತ್ತು ಮದುವೆಯಾದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣಪ್ಪನವರು ನಾವು ವಾಸವಾಗಿರುವ ಮನೆಯ ಬಗ್ಗೆ ನನಗೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ದಾವೆಯಲ್ಲಿ ಹೇಳಿರುವ ಎರಡು ಆಸ್ತಿಗಳು ಮತ್ತು ಮನೆ ಬಿಟ್ಟು ಬೇರೆ ಯಾವುದೇ ಆಸ್ತಿ ಲಕ್ಷ್ಮಣಪ್ಪನವರ ಕುಟುಂಬಕ್ಕೆ ಇರುವುದಿಲ್ಲ. ಲಕ್ಷ್ಮಣಪ್ಪನವರಿಗೆ ಸೆರೀದ ಮನೆ ಮತ್ತು ಖಾಲಿ ಜಾಗ 50 ಅಡಿ ಅಗಲ ಮತ್ತು 90 ಅಡಿ ಉದ್ದವಿರುತ್ತದೆ. ಸದರಿ ಮನೆಗೆ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕ ನನ್ನ ಹೆಸರಿಗೆ ಸುಮಾರು 15 ವರ್ಷಗಳ ಹಿಂದೆ ಪಡೆದುಕೊಂಡಿರುತ್ತೇನೆ. ಲಕ್ಷ್ಮಣಪ್ಪನವರಿಗೆ ಸೇರಿದ ಮನೆಯನ್ನು ಕಬಳಿಸುವ ಉದ್ದೇಶದಿಂದ ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣಪ್ಪ ಮೃತಪಟ್ಟ ನಂತರ ಅವರ ಹೆಂಡತಿ ವೃಂದಮ್ಮನವರ ಹೆಸರಿಗೆ ಖಾತಾ ಪಹಣಿ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಲಕ್ಷ್ಮಣಪ್ಪನವರಿಗೆ ತಮ್ಮ ಜೀವಂತ ಅವಧಿಯಲ್ಲಿ ಅವರಿಗೆ ಸೇರಿದ ಆಸ್ತಿಗಳನ್ನು ಅವರ ಮಕ್ಕಳಿಗಾಗಲೀ ನಮಗೆ ಹಂಚಿಕೊಂಡಬೇಕೆಂಬ ಆಸೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಎಲ್ಲರಿಗೂ ಹಂಚಿಕೆ ಮಾಡಿಕೊಡಬೇಕೆಂದು ಇದ್ದರು ಎಂದು ಹೇಳುತ್ತಾರೆ.

5. ದಿಃ 13-07-2007 ರ ವಿಲ್ ನಲ್ಲಿ ವೃಂದಮ್ಮ ನನಗೂ ಮತ್ತು ಚಂದ್ರಪ್ಪನವರಿಗೆ ದಾವಾ ಐಟಂ ನಂಬರ್ 01 ಸೇರಬೇಕೆಂದು ಹೇಳಿ ಬರೆದಿರುತ್ತಾರೆ. ಲಕ್ಷ್ಮಣಪ್ಪನವರು ಮೃತಪಟ್ಟ ನಂತರ ಅವರ ಆಸ್ತಿಗಳು ಎಲ್ಲ ಮಕ್ಕಳಿಗೂ ಸೇರಬೇಕಾಗಿರುತ್ತದೆ ಎಂದರೆ ಸರಿ. ವೃಂದಮ್ಮನವರಿಗೆ ಓದು ಬರಹ ಬರುವುದಿಲ್ಲ. ವೃಂದಮ್ಮನವರಿಗೆ 2017 ನೇ ಇಸವಿಯಲ್ಲಿ ಸುಮಾರು 80 ವರ್ಷ ವಯಸ್ಸಾಗಿತ್ತು. ನಾನು ಮತ್ತು ಚಂದ್ರಪ್ಪ ಸೇರಿ ದಿಃ 13-07-2007 ರ ವಿಲ್ ಅನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.01 ಒಟ್ಟು ಕುಟುಂಬದ ಆಸ್ತಿಯಾಗಿರುವ ಕಾರಣ ವೃಂದಮ್ಮನವರಿಗೆ ವಿಲ್ ಬರೆದುಕೊಡುವ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ವೃಂದಮ್ಮನವರು ವಿಲ್ ಬರೆಯುವುದಕ್ಕಿಂತ ಮುಂಚೆ ಬೇರೆ ಮಕ್ಕಳ ಒಪ್ಪಿಗೆ ಪಡೆದುಕೊಂಡಿರುವುದಿಲ್ಲ. ವಿಲ್ ಪ್ರಕಾರದಲ್ಲಿ 03 ಎಕರೆ 26 ಗುಂಟೆ ಜಮೀನಂನ್ನು ನನಗೂ ಮತ್ತು ಚಂದ್ರಪ್ಪನಿಗೆ ಕೊಟ್ಟರೆ ಉಳಿದ ಮಕ್ಕಳಿಗೂ ಅಷ್ಟೆ ಜಮೀನು ಸಿಗುವುದಿಲ್ಲ ಎಂದರೆ ಸರಿ. ವಿಲ್ ಅನ್ನು ತಾಲ್ಲೂಕು ಕಚೇರಿಗೆ ಖಾತಾ ಬದಲಾವಣೆಗೆ ಕೊಟ್ಟಿರುವುದಿಲ್ಲ. ನಾನು ಮತ್ತು ಚಂದ್ರಪ್ಪ ಇಬ್ಬರು ಸೇರಿ ಮೋಸದಿಂದ ತಯಾರು ಮಾಡಿದ ವಿಲ್ ಆಗಿರುತ್ತದೆ ವೃಂದಮ್ಮನವರು ವಿಲ್ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಓಎಸ್ 29/2015 ರಲ್ಲಿ ಈ ಪ್ರಕರಣದ 01 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗದೆ ಇರುವ ಕಾರಣ ಆ ದಾವೆಯು ವಜಾವಾಗಿರುತ್ತದೆ ಎಂದರೆ ಸರಿ. ದಾವೆಯು ವಜಾವಾಗಿರುವ ಕಾರಣ ಶಾರದಮ್ಮನವರಿಗೆ ಹಕ್ಕಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೃಂದಮ್ಮನವರು ನಮ್ಮ ಜೊತೆಯಲ್ಲಿ ಎಂದೂ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ವೃಂದಮ್ಮನವರಿಗೆ ಯಾವ ಖಾಯಿಲೆ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ವೃಂದಮ್ಮನರಿಗೆ ಚಿಕಿತ್ಸೆಯನ್ನು ಕೊಡಿಸಿರುವುದಿಲ್ಲ ಮತ್ತು ಅವರ ಆರೈಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನುವೃಂದಮ್ಮನವರಿಗೆ ನಾಟಿ ಔಷಧಿ ಕೊಡಿಸಿರುವುದಿಲ್ಲ ಅವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ